o.s. 101/2013
Dt:22.07.2026.

**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು**

(ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

ದಿಃ 22.07.2026.

ಅಸಲು ದಾವಾ ನಂ. 101/2013

ಡಿ.ಡಬ್ಲ್ಯೂ -1

(ಮುಂದುವರಿದ ಪಾಟೀ ಸವಾಲು ಶ್ರೀ ಓ.ಡಿ.ಜಿ. ವಕೀಲರಿಂದ ವಾದಿಯ ಪರವಾಗಿ)

ಸರ್ವೆ ನಂ. 51/1 ಮತ್ತು 51/2 ನ ಸ್ವತ್ತುಗಳು ದಾವಾ ಐಟಂ ನಂ. 1 ಮತ್ತು 2ನೇ ಸ್ವತ್ತುಗಳು ಎಂದರೆ ಸದರಿ ಸ್ವತ್ತುಗಳನ್ನು 7ನೇ ಪ್ರತಿವಾದಿ ಲಕ್ಷ್ಮಮ್ಮ ನಿಂದ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾವಾ ಸ್ವತ್ತುಗಳನ್ನು ಈ ದಾವಾ ಬಾಕಿ ಇರುವಾಗಲೇ ಖರೀದಿಸಿದ್ದೀರಾ ಎಂದರೆ ಸಾಕ್ಷಿಯು ನರಸಿಂಹೇಗೌಡ ಮತ್ತು ಲಕ್ಷ್ಮಮ್ಮ ರ ನಡುವೆ ಇದ್ದ ಪ್ರಕರಣವು ಮುಗಿದು ಲಕ್ಷ್ಮಮ್ಮನ ಪರವಾಗಿ ಆದೇಶವಾದ ನಂತರ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸಿವಿಲ್ ದಾವೆಯನ್ನು 1ನೇ ಪ್ರತಿವಾದಿ ನರಸಿಂಹೇಗೌಡರು ಲಕ್ಷ್ಮಮ್ಮ ನ ವಿರುದ್ಧ ಹೂಡಿದ್ದರು. ತೀರ್ಪಿನ ಪ್ರತಿಯು ಲಕ್ಷ್ಮಮ್ಮ ಬಳಿ ಇದ್ದು, ಅದನ್ನು ನೋಡಿ ನಂತರ ನಾನು ಖರೀದಿ ಮಾಡಿರುತ್ತೇನೆ. ವಾದಿ ಹರೀಶ್ ರವರು ಈ ದಾವೆಯನ್ನು ದಾಖಲು ಮಾಡಿದ ನಂತರ ತೀರ್ಪಿನ ಪ್ರತಿಯು ಲಕ್ಷ್ಮಮ್ಮ ಬಳಿಯಿಂದ ಪಡೆದಿರುತ್ತೇನೆ. ಈ ದಾವೆಯನ್ನು ದಾಖಲು ಮಾಡುವವರೆಗೂ ಈ ಹಿಂದಿನ ಒ ಎಸ್ ನಂ. 204/2008 ಪ್ರಕರಣದ ಬಗ್ಗೆ ವಾದಿಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಹೂಡಿದ ನಂತರ ಹಿಂದಿನ ಪ್ರಕರಣದ ಪ್ರತಿಯನ್ನು ನೀವು ನ್ಯಾಯಾಲಯಕ್ಕೆ ಹಾಜರುಮಾಡಿರುವುದು ಹರೀಶ್ ರವರಿಗೆ ತಿಳಿಯಲು ಎಂದು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸದರಿ ಪ್ರಕರಣಕ್ಕೂ ಹರೀಶ್ ಗೂ ಯಾವುದೇ ಸಂಬಂಧ ಇರುವುದಿಲ್ಲ. ನಾನು ಲಕ್ಷ್ಮಮ್ಮ ರವರಿಂದ ಸದರಿ ಜಮೀನನ್ನು ಖರೀದಿ ಮಾಡಿರುತ್ತೇನೆ . ನಾನು ಹಾಜರುಪಡಿಸಿರುವ ಸ್ಕೆಚ್. ಎಂ. ಆರ್. ಪಹಣಿಗಳು ಈ ಪ್ರಕರಣಕ್ಕೆಂದು ಸೃಷ್ಟಿ ಮಾಡಿಕೊಂಡಿರುವುದು ಎಂದರೆ ಸರಿಯಲ್ಲ. ಈ ದಾಖಲೆಗಳಿಗೆ ಯಾವುದೇ ಮಾನ್ಯತೆ ಇರುವುದಿಲ್ಲಎಂದರೆ ಸರಿಯಲ್ಲ. ಈ ದಾಖಲೆಗಳು ಹರೀಶ್ ರವರನ್ನು ಬದ್ದಪಡಿಸುವುದಿಲ್ಲ ಎಂದರೆ ನಾವು ಲಕ್ಷ್ಮಮ್ಮನಿಂದ ಖರೀದಿ ಮಾಡಿರುತ್ತೇನೆ ಎಂದು ನುಡಿಯುುತ್ತಾರೆ. ನಿಡಿ -21 ನ್ನು ಸಕಲೇಶಪುರ ಉಪ

ವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ನರಸಿಂಹೇಗೌಡರು ಲಕ್ಷ್ಮಮ್ಮ ನ ವಿರುದ್ಧ ದಾಖಲು ಮಾಡಿರುತ್ತಾರೆ. ಈ ದಾಖಲೆಗಳನ್ನು ಇತ್ತೀಚಿಗೆ ಹಾಜರುಮಾಡಿರುವುದು ವಾದಿಯ ಗಮನಕ್ಕೆ ಬರಲಿ ಎಂದರೆ ಸಾಕ್ಷಿಯು ನಾನು ನ್ಯಾಯಾಲಯದ ಅವಗಾಹನೆಗೆ ಹಾಜರು ಮಾಡಿರುತ್ತೇನೆ. ಈ ಬಗ್ಗೆ ವಾದಿಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ಸ್ವತ್ತಿಗೂ ನನಗೂ, ಲಕ್ಷ್ಮಮ್ಮ ಹಾಗೂ ಬರೆದುಕೊಟ್ಟವರಿಗೂ ಯಾವುದೇ ಹಕ್ಕು ಇಲ್ಲ ಎಂದೆರೆ ಸರಿಯಲ್ಲ. ಇದು ವಾದಿಯ ಅಜ್ಜನ ಆಸ್ತಿ ಎಂದರೆ ಸಾಕ್ಷಿಯು ಇದು ಲಕ್ಷ್ಮಮ್ಮ ಮತ್ತು ರಾಮೇಗೌಡರ ಆಸ್ತಿ ಎಂದು ನುಡಿಯುತ್ತಾರೆ.

ಮುಂದುವರಿದ ಪಾಟಿ ಸವಾಲಿಗಾಗಿ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ನೀಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀಮತಿ ದೀಪಿಕ ಎನ್.)

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ, ಅರಕಲಗೂಡು